# ಇಂದು ಸಹ್ಯಾದ್ರಿಯಲ್ಲಿ ಟೆಡ್ ಎಕ್ಸ್

**ಮಂಗಳೂರು:** ನಗರದ ಹೊರವಲಯದ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಜು.28ರಂದು ಟೆಡ್ ಎಕ್ಸ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಡೀನ್ ರಮೇಶ್ ಕೆ.ಜಿ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿರುವ ಟೆಡ್ ಎಕ್ಸ್ ಜಾಗತಿಕ ಸಮುದಾಯದ ಮುಖಾಂತರ ಕಲೆ, ಸಂಸ್ಕೃತಿ, ವಿಜ್ಞಾನ, ಆವಿಷ್ಕಾರ, ಮುಂದಾಳತ್ವ, ಔದ್ಯೋಗಿಕ ಪ್ರಗತಿ, ಕೃಷಿಯಲ್ಲಿ ತಾಂತ್ರಿಕತೆ, ಮಾನಸಿಕ ಸಮತೋಲನ ಮೊದಲಾದ ಹೊಸ ಹೊಸ ವಿಚಾರಧಾರೆಗಳಿಗೆ ಪ್ರೋತ್ಸಾಹ ನೀಡುತ್ತ ಯುವ ಜನತೆಗೆ ಒಂದು ಆಯಾಮ ನೀಡುತ್ತಿದೆ ಎಂದರು. ಸಹ್ಯಾದ್ರಿ ಕಾಲೇಜಿನಲ್ಲಿ ನಡೆಯುವ ಬೆಳಗ್ಗೆ 8ರಿಂದ ಸಂಜೆ 6ರವರೆಗೆ ನಡೆಯುವ ಕಾರ್ಯಕ್ರಮದಲ್ಲಿ ಒಟ್ಟು ಎಂಟು ಮಂದಿ ಪ್ರತಿಭಾನ್ವಿತರು ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿ ಯುವಜನತೆಗೆ ಸ್ಫೂರ್ತಿದಾಯಕ ಭಾಷಣ ಮಾಡಲಿದ್ದಾರೆ ಎಂದವರು ತಿಳಿಸಿದರು. ಟೆಡ್ ಎಕ್ಸ್ ಮುಖ್ಯ ಸಂಘಟಕಿ ಬಸವರಾಜೇಶ್ವರಿ ಅಂಬಿ, ಸಹ ಸಂಘಟಕ ಸೃಜನ್, ಡಾ. ಶಮಂತ್ ರೈ ಇದ್ದರು.